11+84

8

12/03/26

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಚುನಾವಣಾ ಕ್ಷೇತ್ರ) ಇವರು ನಿಯಮ-330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

ಕ್ರ ಸಂ.: 4
ದಿನಾಂಕ: 12.03.2026

ವಿಷಯ: **ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಗೆ ಒಳಪಡುವ ನೂರಾರು ಗ್ರಾಮಗಳನ್ನೊಳಗೊಂಡ ಸುಮಾರು 5 ಲಕ್ಷಕ್ಕಿಂತ ಹೆಚ್ಚು ಸಂತ್ರಸ್ಥ ರೈತ ಕುಟುಂಬಗಳ ಈ ನಾಡಿಗಾಗಿ ತಮ್ಮ ಆಸ್ತಿ ಅಂತಸ್ತುಗಳನ್ನು ತ್ಯಾಗಿ ಮಾಡಿದ ರೈತರ ಬದುಕು-ಭವಣೆಗಳು (ವಾಸ್ತವಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳು) ಮತ್ತು ಪ್ರಸ್ತುತ ಇವರ ಜೀವನ ಗುಣಮಟವನ್ನು ಉನ್ನತೀಕರಿಸಲು ಹಾಗೂ ಪುನರ್‌ವಸತಿ & ಪುನರ್‌ನಿರ್ಮಾಣ ಕಲ್ಪಿಸುವ ನಿಟ್ಟಿನಲ್ಲಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತಗೆದುಕೊಳ್ಳಬೇಕಾದ ಕ್ರಮಗಳ ಕುರಿತು**

*****

**ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2:**

ಕೃಷ್ಣಾ ನ್ಯಾಯಾಧೀಕರಣ-1 ರಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ 734 ಟಿ.ಎಂ.ಸಿ. ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2 ರ ಯೋಜನೆಗೆ 173.00 ಟಿ.ಎಂ.ಸಿ. ನೀರಿನ ಹಂಚಿಕೆ ಆಗಿರುತ್ತದೆ. ಸದರಿ ಹಂಚಿಕೆಯಡಿ 11 ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದ್ದು, ಉತ್ತರ ಕರ್ನಾಟಕದ 5 ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ ಹಾಗೂ ರಾಯಚೂರು ಅಡಿಯಲ್ಲಿ ಸುಮಾರು 6,22,023 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2ರಡಿಯಲ್ಲಿ ಮುಳುಗಡೆ ಬಾಧಿತವಾದ 176 ಗ್ರಾಮಗಳಿಗೆ ಪರ್ಯಾಯವಾಗಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸಿ 136 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ.

| ಕ್ರ ಸಂ | ವಿವರ | ನಾರಾಯಣಪುರ ಜಲಾಶಯ | ಆಲಮಟ್ಟಿ ಜಲಾಶಯ | ಒಟ್ಟು |
|---|---|---|---|---|
| 1 | ಮುಳುಗಡೆ ಗ್ರಾಮಗಳ ಸಂಖ್ಯೆ | 40 | 136 | **176** |
| 2 | ಪುನರ್ವಸತಿ ಕೇಂದ್ರಗಳ ಸಂಖ್ಯೆ | 34 | 102 | **136** |
| 3 | ಯೋಜನಾ ಭಾಧಿತ ಕುಟುಂಬಗಳ ಸಂಖ್ಯೆ | 11,744 (58,720 ಜನಸಂಖ್ಯೆ) | 58,432 (2,92,160 ಜನಸಂಖ್ಯೆ) | **70,176 (3,50,880 ಜನಸಂಖ್ಯೆ)** |

- ನಾರಾಯಣಪುರ ಜಲಾಶಯದ ನೀರಿನ ಹಿನ್ನೀರಿನ ಮುಳುಗಡೆ ಹೊಂದಿದ 40 ಗ್ರಾಮಗಳಿಗೆ ನಿರ್ಮಿಸಲಾದ 34 ಪುನರ್ವಸತಿ ಕೇಂದ್ರಗಳ ಪೈಕಿ 30 ಪುನರ್ವಸತಿ ಕೇಂದ್ರಗಳನ್ನು 1991 ರಿಂದ 2014ರವರೆಗೆ ಮುಂದಿನ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆ.
- ಸರ್ಕಾರದ ಆದೇಶ ದಿನಾಂಕ:08.07.2016ರಲ್ಲಿ ಇನ್ನುಳಿದ 106 ಪುನರ್ವಸತಿ ಕೇಂದ್ರಗಳನ್ನು ಬಾಕಿ/ಮುಂದುವರೆದ ಕಾಮಗಾರಿಗಳಿಗಾಗಿ ಅವಶ್ಯವಿರುವ ರೂ. 191.50 ಕೋಟಿ ಒಂದಾವರ್ತಿ ಅನುದಾನದೊಂದಿಗೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಆದೇಶವಾಗಿರುತ್ತದೆ. ಅದರಂತೆ, ಅನುಮೋದಿತ ಅನುದಾನದೊಂದಿಗೆ 104 ಪುನರ್ವಸತಿ ಕೇಂದ್ರಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದ್ದು, ಇನ್ನೂ 2 (ಕಲಾದಗಿ & ಯಡಹಳ್ಳಿ (ಜಿ)) ಪುನರ್‌ವಸತಿ ಕೇಂದ್ರಗಳನ್ನು ಹಸ್ತಾಂತರಿಸುವುದು ಜಾರಿಯಲ್ಲಿದೆ.

* ಸದರಿ 106 ಪುನರ್ವಸತಿ ಕೇಂದ್ರಗಳನ್ನು ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸದ ನಂತರವೂ ಸಹ ಸರ್ಕಾರದ ದಿನಾಂಕ:08.07.2016ರಂದು ನೀಡಿದ ಆದೇಶದಂತೆ ಅನುಮೋದನೆಗೊಂಡ ರೂ.191.50 ಕೋಟಿ ಮೊತ್ತ ಅಲ್ಲದೇ ಕೆಲವೊಂದು ಪುನರ್‌ವಸತಿ ಕೇಂದ್ರಗಳಿಗೆ 2019–20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಈ ಕೆಳಕಂಡ ಕಾಮಗಾರಿಗಳನ್ನು ಸಹ ನಿಗಮದಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ.

| ಕ್ರ ಸಂ. | ಪುನರ್‌ವಸತಿ ಕೇಂದ್ರಗಳು | ವಿವರಗಳು | ಒದಗಿಸಿದ ಅನುದಾನ (ರೂ ಕೋಟಿಗಳಲ್ಲಿ) | ಷರಾ |
|---|---|---|---|---|
| 1 | ಹಂತ–1 & 2ರಲ್ಲಿ ನಿರ್ಮಿಸಿ ಹಸ್ತಾಂತರಿಸಲಾದ 106 ಪು. ಕೇಂದ್ರಗಳು | ಸರ್ಕಾರದ ಆದೇಶ ದಿನಾಂಕ:08.07.2016 | 191.50 | ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದೆ |
| 2 | ಕೋಲಾರ್ ಪುನರ್‌ವಸತಿ ಕೇಂದ್ರ | 2019–20ನೇ ಸಾಲಿನ ಬಜೆಟ್ ಘೋಷಣೆ | 50.00 | ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ. |
| 3 | ಮುದ್ದೇಬಿಹಾಳ ತಾಲ್ಲೂಕಿನ 10 ಪುನರ್‌ವಸತಿ ಕೇಂದ್ರಗಳು | ದಿನಾಂಕ:05.10.2020ರ 126ನೇ ನಿಗಮದ ಮಂಡಳಿ ಸಭೆಯ ನಿರ್ಣಯ ಹಾಗೂ ಸರ್ಕಾರದ ಪತ್ರ ದಿನಾಂಕ:24.06.2021 | 25.00 | ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದೆ |
| 4 | ಬೀಳಗಿ ಮತ ಕ್ಷೇತ್ರ ವ್ಯ ವ್ಯಾಪ್ತಿಯಲ್ಲಿನ 40 ಪುನರ್‌ವಸತಿ ಕೇಂದ್ರಗಳು | ದಿನಾಂಕ:05.12.2022ರ 136ನೇ ನಿಗಮದ ಮಂಡಳಿ ಸಭೆ | 40.00 | ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿ & ಟೆಂಡರ್ ಹಂತದಲ್ಲಿರುತ್ತದೆ. |
| | | ಒಟ್ಟು | 306.50 | |

**ಪುನರ್‌ವಸತಿ ಮತ್ತು ಪುನರ್ ನಿರ್ಮಾಣದಡಿ ಸಂತ್ರಸ್ಥರ ಕುಟುಂಬಗಳ ಜೀವನಮಟ್ಟ ಸುಧಾರಿಸಲು ಕೈಗೊಂಡಿರುವ ಕ್ರಮಗಳು:**

* ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಗ್ರಾಮ ಮುಳುಗಡೆಯಾದ ಭಾದಿತ ಸಂತ್ರಸ್ಥರಿಗೆ ಈ ಮುಂಚೆ ಆಯಾ ಪುನರ್ವಸತಿ ಕೇಂದ್ರಗಳಲ್ಲಿ ಎನ್.ಜಿ.ಓ. ಸಂಸ್ಥೆಯವರಿಂದ ಟೇಲರಿಂಗ್, ಕಸೂತಿ, ಬ್ಯಾಗ್ ತಯಾರಿಕೆ, ಬಡಿಗೆ, ಕಮ್ಮಾರ, ಕುಂಬಾರ ಹಾಗೂ ಇನ್ನಿತರ ಕುಶಲಕರ್ಮಿ ಕೆಲಸಗಳ ಕೆಲಸ ನೀಡುವಲ್ಲಿ ತರಬೇತಿ ನೀಡಲಾಗಿದೆ. ಹಾಗೂ ಉತ್ಪನ್ನ ಹೆಚ್ಚುವರಿ ಯೋಜನೆಯಡಿ (ಐ.ಜಿ.ಎಸ್.) (Income Generation Scheme) ಎಮ್ಮೆ, ಆಡು, ಕುರಿ ಸಾಕಾಣಿಕೆಗಾಗಿ ರೂ.20,000/- ಗಳ ಸಹಾಯಧನ ನೀಡಲಾಗಿದೆ.
* ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಜಮೀನು ಮುಳುಗಡೆಯಾದ ಬಾಧಿತ ಕುಟುಂಬಗಳ ಸಂತ್ರಸ್ತರಿಗೆ ಸಂಬಂದಿಸಿದಂತೆ, ನಿರಾಶ್ರಿತರ ಯೋಜನೆ ಅಡಿಯಲ್ಲಿ ಸರ್ಕಾರದ ಹುದ್ದೆಗಳ ನೇಮಕಾತಿಯಲ್ಲಿ ಶೇಕಡಾ. 5 ರಷ್ಟು ಮೀಸಲಾತಿ ಕಲ್ಪಿಸಲಾಗಿದ್ದು ಪ್ರಸ್ತುತ ಚಾಲ್ತಿಯಲ್ಲಿದೆ.

- ಸರ್ಕಾರದ ಆದೇಶ ಸಂಖ್ಯೆ:RD 21 REH 94 (P) Bangalore Dated. 15-05-1995ರ ಪ್ರಕಾರ ಅರ್ಹ ಸಂತ್ರಸ್ಥರಿಗೆ ಅವರು ಹೊಂದಿದ ಭೂ ಹಿಡುವಳಿ ಆಧಾರದ ಮೇಲೆ ನಿವೇಶನವನ್ನು ಮುಖ್ಯ ಸಂತ್ರಸ್ಥರಿಗೆ ಹಂಚಿಕೆ ಮಾಡಲಾಗಿದೆ.
- ಇದೂ ಅಲ್ಲದೇ ಇಬ್ಬರು ಅರ್ಹ ವಯಸ್ಕ ಗಂಡು ಮಕ್ಕಳಿಗೆ ಮತ್ತು 35 ವರ್ಷ ಮೀರಿದ ಅವಿವಾಹಿತ ಮಹಿಳೆಗೆ, ಸಹೋದರ ಸಂತ್ರಸ್ಥರಿಗೆ ಮುನರ್‌ವಸತಿ ಸೌಲಭ್ಯ ಕಲ್ಪಿಸಲಾಗಿದೆ.
- ಸರ್ಕಾರದ ಆದೇಶ ಸಂಖ್ಯೆ:RD 21 REH 94 (P) Bangalore Dated. 15.05.1995ರ ಪ್ರಕಾರ ಅರ್ಹ ಸಂತ್ರಸ್ಥರಿಗೆ ಮನೆ ಕಟ್ಟಡ ಅನುಕಂಪ ಪರಿಹಾರ ಅನುದಾನ (House Construction Grant) ರೂ.22,000/- & ಜೀವನಾಂಶ ಭತ್ಯೆ (Substitance Allowance) ರೂ.2,800/- ನೀಡಲಾಗುತ್ತಿದೆ.
- ಕೃ.ಮೇ.ಯೋ. ಅಡಿ ಜಮೀನು ಕಳೆದುಕೊಂಡ ಸಂತ್ರಸ್ಥರಿಗೆ ಜಮೀನು ಖರೀದಿಗೆ ಅನುಕಂಪ ಪರಿಹಾರ ಮೊತ್ತವನ್ನು (Land Purchase Grant) ಈ ಕೆಳಗಿನಂತೆ ನೀಡಲಾಗುತ್ತಿದೆ.
  - (i) ಕ್ಷೇತ್ರ 0.25 ಗುಂಟೆ ದಿಂದ 3.50 ಹೆಕ್ಟರ್ ಜಮೀನು ಕಳೆದುಕೊಂಡವರಿಗೆ: ರೂ.60,000/-
  - (ii) ಕ್ಷೇತ್ರ 3.51 ಹೆಕ್ಟರ್ ರಿಂದ 6.75 ಹೆಕ್ಟರ್ ಜಮೀನು ಕಳೆದುಕೊಂಡವರಿಗೆ : ರೂ.40,000/-
  - (iii) ಕ್ಷೇತ್ರ 6.76 ಹೆಕ್ಟರ್ ರಿಂದ 10 ಹೆಕ್ಟರ್ ಜಮೀನು ಕಳೆದುಕೊಂಡರವರಿಗೆ : ರೂ.20,000/-
- ಸದರಿ ಎಲ್ಲ ಮನರವಸತಿ ಕೇಂದ್ರಗಳಲ್ಲಿ ಸಂತ್ರಸ್ಥರಿಗೆ ಶಾಶ್ವತವಾಗಿ ನೆಲೆಸುವ ಸಲುವಾಗಿ ರಸ್ತೆ, ನೀರು, ಸಾರ್ವಜನಿಕ ಸರ್ಕಾರಿ ಕಟ್ಟಡಗಳು, ತಿಪ್ಪೆಗುಂಡಿ, ಬಣವೆ ಹಾಗೂ ಸ್ಮಶಾನ ಜಾಗೆ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2ರಡಿ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡಿರುವ ಸಂತ್ರಸ್ಥರಿಗಾಗಿ ಮನರ್‌ವಸತಿ & ಮನರ್‌ನಿರ್ಮಾಣದ ನಿಯಮಾವಳಿಯನ್ವಯ ಕಾಲಕಾಲಕ್ಕೆ ವಿಳಂಬಕ್ಕೆ ಆಸ್ಪದ ನೀಡದೆ ಅಗತ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಂಡು ಮುಂದಿನ ನಿರ್ವಹಣೆಗಾಗಿ ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿದ್ದು, ಸಂತ್ರಸ್ಥ ಕುಟುಂಬಗಳ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

**ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3:**

ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನಲ್ಲಿ ರಾಜ್ಯಕ್ಕೆ ಹಂಚಿಕೆಯಾದ ಒಟ್ಟಾರೆ 173 ಟಿ.ಎಂ.ಸಿ. (ನದಿ ಪಾತ್ರದಡಿ ನೈಸರ್ಗಿಕ ಹರಿವು 7 ಟಿ.ಎಂ.ಸಿ ಒಳಗೊಂಡು) ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಗೆ 130 ಟಿ.ಎಂ.ಸಿ. ಹಂಚಿಕೆಯಾಗಿರುತ್ತದೆ. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2 ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಗೆಜೆಟ್ ಪ್ರಕಟಣೆ ಆಗಬೇಕಾಗಿರುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಗೆ ಹಂಚಿಕೆಯಾದ 130 ಟಿ.ಎಂ.ಸಿ. ನೀರಿನ ಬಳಕೆಗಾಗಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆಯನ್ನು RL 519.60 Mt ದಿಂದ RL 524.256 Mt. ವರೆಗೆ ಎತ್ತರಿಸುವುದು ಒಳಗೊಂಡಿರುತ್ತದೆ.

ಈ ಯೋಜನೆಯಡಿ 9 ಉಪ ಯೋಜನೆಗಳ ಅಂದರೆ, ಮುಳವಾಡ, ಚಿಮ್ಮಲಗಿ, ಹೇರಕಲ್, ಮಲ್ಲಾಬಾದ, ಕೊಪ್ಪಳ ಏತ ನೀರಾವರಿ, ಇಂಡಿ ಹಾಗೂ ರಾಂಪೂರ ಏತ ನೀರಾವರಿ ವಿಸ್ತರಣೆ, ನಾರಾಯಣಮರ ಬಲದಂಡೆ ಕಾಲುವೆ ವಿಸ್ತರಣೆ ಹಾಗೂ ಭೀಮಾ ಫ್ಲಾಂಕ ಉಪ-ಯೋಜನೆಗಳ ಅನುಷ್ಠಾನದೊಂದಿಗೆ ಉತ್ತರ ಕರ್ನಾಟಕದ ವಿಜಯಮರ, ಬಾಗಲಕೋಟೆ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿ ಒಟ್ಟಾರೆ 5.94 ಲಕ್ಷ ಹೆಕ್ಟೇರ್ (14.67 ಲಕ್ಷ ಎಕರೆ) ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ- 3ರಡಿಯಲ್ಲಿ ಮುಳುಗಡೆ ಬಾಧಿತವಾದ 20 ಬಾದಿತ ಗ್ರಾಮಗಳಿಗೆ ಪರ್ಯಾಯವಾಗಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸಿ 24 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಲಾಗಿರುತ್ತದೆ.

- ಈ ಪೈಕಿ ಹೊಸ ಭೂಸ್ವಾಧೀನದ ನಿಯಮಾವಳಿಯಂತೆ 08 ಪುನರ್ವಸತಿ ಕೇಂದ್ರಗಳಲ್ಲಿ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 02 ಪುನರ್ವಸತಿ ಕೇಂದ್ರಗಳಾದ ಕುಂದರಗಿ ಹಾಗೂ ಬಾವಲತ್ತಿಗಳಿಗಾಗಿ ಅವಶ್ಯವಿರುವ ಜಮೀನುಗಳ ಐತೀರ್ಪು ನ್ಯಾಯಾಲಯದಲ್ಲಿ ಆಸಿಂಧು ಆಗಿ ಆದೇಶವಾಗಿರುತ್ತದೆ.
- ಬಾಕಿ ಉಳಿದ 13 ಪುನರ್ವಸತಿ ಕೇಂದ್ರಗಳಿಗೆ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯು ವಿವಿಧ ಹಂತಗಳಲ್ಲಿರುತ್ತವೆ.
- 1 ಗದ್ದನಕೇರಿ ಗ್ರಾಮದ ಸ್ವಾಧೀನದ ಕುರಿತು ತಾಂತ್ರಿಕವಾಗಿ ಪರಿಶೀಲಿಸಿ ತೀರ್ಮಾನಿಸಬೇಕಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-IIIರ ಭೂಸ್ವಾಧೀನ ಪ್ರಕ್ರಿಯೆಯನ್ನು ಒಂದೇ ಹಂತದಲ್ಲಿ ತ್ವರಿತವಾಗಿ ಕೈಗೆತ್ತಿಕೊಳ್ಳುವ ಕುರಿತಂತೆ, ಒಪ್ಪಂದದ ಐತೀರ್ಪು ರಚಿಸಲು ಏಕರೂಪ ದರ ನಿಗಧಿಪಡಿಸಲು ಹಾಗೂ ಸಂಬಂಧಿಸಿದ ಇನ್ನಿತರೆ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ದಿನಾಂಕ 09.10.2025 ಅನ್ನು ಹೊರಡಿಸಲಾಗಿದೆ.

ಸದರಿ ಆದೇಶದಲ್ಲಿ, ಯೋಜನೆ ಅಡಿ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಲ್ಪಿಸುವ ಬದಲಾಗಿ ಪರಿಹಾರ ಪ್ಯಾಕೇಜ್ ನೀಡಲು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ನೀತಿಯನ್ನು ರೂಪಿಸುವುದು ಎಂದು ಆದೇಶಿಸಲಾಗಿರುತ್ತದೆ. ಇದರನ್ವಯ, ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ ಗ್ರಾಮಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಬದಲಾಗಿ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಪರ್ಯಾಯ ನೀತಿಯನ್ನು ರೂಪಿಸುವಂತೆ ನಿರ್ಣಯಿಸಲಾಗಿದ್ದು, ಪ್ರಕ್ರಿಯೆ ಜಾರಿಯಲ್ಲಿದೆ.

**ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು ಕುರಿತು:**

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ಕ್ಕೆ ಹಂಚಿಕೆಯಾಗಿರುವ ನೀರಿನ ಬಳಕೆಗೆ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್.519.60 ಮೀ. ನಿಂದ ಆರ್.ಎಲ್.524.256 ಮೀ.ಗೆ ಎತ್ತರಿಸುವುದಾಗಿದ್ದು, ಇದು ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗೆ ಒಳಪಟ್ಟಿದ್ದು, ಐತೀರ್ಪು ಇನ್ನೂ ಅಧಿಸೂಚನೆ ಆಗಬೇಕಾಗಿದೆ.

ದಿನಾಂಕ 16.09.2011ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪನ್ನು ಗೆಜೆಟ್ ಪ್ರಕಟಣೆ ಮಾಡದಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲಾಗಿದ್ದು, ಸದರಿ ತೀರ್ಪನ್ನು ಮಾರ್ಪಡಿಸುವಂತೆ ಕೋರಿ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮಧ್ಯಕಾಲೀನ ಅರ್ಜಿಗಳನ್ನು ಸಲ್ಲಿಸಿದೆ.

ಮುಂದುವರೆದು, ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಪನ್ನು ಗೆಜೆಟ್ ಅಧಿಸೂಚನೆ ಹೊರಡಿಸುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಮಾರ್ಪಡಿಸಲು ಸೂಕ್ತ ಅರ್ಜಿ/ಅಫಿಡವಿಟ್ ಸಲ್ಲಿಸುವಂತೆ ಹಾಗೂ ನಂತರ ನ್ಯಾಯಾಧೀಕರಣದ ಆದೇಶವನ್ನು ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರವನ್ನು ನಿರಂತರವಾಗಿ ಕೋರಲಾಗುತ್ತಿದೆ. ಸದರಿ ವಿಷಯದ ಕುರಿತು ರಾಜ್ಯ ಸರ್ಕಾರವು ಎಲ್ಲಾ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

(ಜಸಂಇ 37 ಡಬ್ಲ್ಯೂಬಿಎಂ 2026)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು